O.S. NO. 42/2019

DW – 3 .

Dated 01–04–2025

ಸಾಕ್ಷಿಯನ್ನು ಈ ದಿನ ದಿನಾಂಕ 01–04–2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿಯರ ಪರ ವಕೀಲರಿಂದಃ

ನಾನು ಮತ್ತು ಪ್ರತಿವಾದಿ ಸಂಬಂದಿಕರು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿ ಓದಿಸಿ ತಿಳಿದುಕೊಂಡಿರುತ್ತೇನೆ. ಖರೀದಿ ವ್ಯವಹಾರ 2019 ರಲ್ಲಿ ಆಗಿರುತ್ತದೆ. ಖರೀದಿ ವ್ಯವಹಾರದಲ್ಲಿ ಭಾಗವಹಿಸಲು ನನಗೆ ಪ್ರತಿವಾದಿ ಕರೆದಿದ್ದರು. ಸದರಿ ಖರೀದಿ ವ್ಯವಹಾರದಲ್ಲಿ ಒಟ್ಟು 7 ಜನ ಸೇರಿದ್ದೇವು. ಅವರಲ್ಲಿ ಶಿವಾನಂದ ದೂಪದಾಳ, ಶಿವಾನಂದ ತಳವಾರ ರವರು ಪರಿಚಯ ಇರುತ್ತಾರೆ, ಉಳಿದವರ ಮುಖ ಪರಿಚಯ ಇರುತ್ತದೆ. ಖರೀದಿ ಕಾಲಕ್ಕೆ ಕಲ್ಯಾಣಪ್ಪ ವಯಸ್ಸು 75 ವರ್ಷ ಆಗಿತ್ತು. ಸದರಿ ಕಲ್ಯಾಣಪ್ಪರವರ ಮನೆತನದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಖರೀದಿ ವ್ಯವಹಾರಕ್ಕೆ ನಾನು 3–4 ಸಲ ಹೊಗಿ ಭಾಗವಹಿಸಿದ್ದೇನೆ. ಸದರಿ 3– 4 ಸಲ ಯಾವಾಗ ಯಾವಾಗ ಸೇರಿದ್ದೇವು ಎಂದು ನನಗೆ ದಿನಗಳು ನೆನಪಿಲ್ಲ. ಎಲ್ಲಿ ಎಲ್ಲಿ ಸೇರಿದ್ದೀರಿ ಎಂದರೆ ಖರೀದಿಯ ಒಂದು ತಿಂಗಳ ಪೂರ್ವದಲ್ಲಿ ಪ್ರತಿವಾದಿ ಮನೆಯಲ್ಲಿ ಒಂದು ಸಲ , ಅದಕ್ಕೆ ಮೊದಲು 2 ಸಲ ಹೊರಗೆ ಸೇರಿದ್ದೇವು. ದಿನಾಂಕ 23–01–2019 ರಂದು ಸಬ ರಜಿಸ್ಟಕರ ಕಚೇರಿಗೆ ಹೊಗಿದ್ದೇವು

ಅಲ್ಲಿ ದಾಖಲೆಯನ್ನು ತಯಾರಿಸಿ ನಂಬರ ಹಚ್ಚಲು ಲೇಟದ ನಂತರ ಮಾರನೇ ದಿನ ಪುನಃ ಹೊಗಿರುತ್ತೇವೆ. ಖರೀದಿಯ ಒಂದು ತಿಂಗಳ ಪೂರ್ವ ಕೊನೆಯದಾಗಿ ಸೇರಿದ್ದೇವು. ಇದಾದ ನಂತರ ನಾನು ಕಲ್ಯಾಣಪ್ಪ ರವರಿಗೆ ಹೊಗಿ ಬೇಟಿ ಆಗಿಲ್ಲ. ಸದರಿ ಕಲ್ಯಾಣಪ್ಪ ರವರ ಪರವಾಗಿ 3 ಜನ ಹಾಜರಿದ್ದರು. ಅವರ ವಯಸ್ಸು 40-50 ಇದ್ದವು. ಅವರ ಹೆಸರು ನೆನಪಿಲ್ಲ. ಅವರ ಚೆಹರಾ ಪಟ್ಟಿ ನೆನಪಿರುತ್ತದೆ. ಸದರಿ 3 ಜನ ಕಲ್ಯಾಣಪ್ಪ ರವರಿಗೆ ಸಂಬದಿಕರೊ ಅಥವಾ ಇಲ್ಲವೊ ಎಂದು ನಾನು ವಿಚಾರಣೆ ಮಾಡಿಲ್ಲ. ದಾವಾ ಆಸ್ತಿ ತೆಗೂರ ಗ್ರಾಮದಲ್ಲಿ ಇರುತ್ತವೆ. ಖರೀದಿ ಒಂದು ತಿಂಗಳ ಪೂರ್ವ ಬೇಟಿ ಆದಾಗ ಕಲ್ಯಾಣಪ್ಪ ರವರಿಗೆ ಯಾವುದೇ ಖರೀದಿ ಹಣ ಕೊಟ್ಟಿಲ್ಲ. ಖರೀದಿ ಹಣ ಕೊಡುತೆಗೆದುಕೊಳ್ಳುವ ಮಾತು ಕತೆ ಸದರಿ ಖರೀದಿ ಪೂರ್ವ ಒಂದು ತಿಂಗಳ ಸೇರಿದಾಗ ಆಗಿಲ್ಲ. ಖರೀದಿ ಸಮಯದಲ್ಲಿ ಆಗಿರಬಹುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಖರೀದಿ ಸಮಯದಲ್ಲಿ ನನ್ನ ಸಮಕ್ಷಮ ಖರೀದಿ ಹಣ ಕ್ಕೊಟಿರುತ್ತಾರೆ ಎಂದು ನುಡಿದಿರುತ್ತಾರೆ. ಖರೀದಿ ಹಣ ಕೊಡುವಾಗ ಸಮಯ ಮದ್ಯಾಹ್ನ 3 ಗಂಟೆ ಆಗಿತ್ತು. ಖರೀದಿ ಹಣ ಕೊಟ್ಟ ದಿನ ಗೊತ್ತಿಲ್ಲ ಆದರೆ ದಿನಾಂಕ 24-01-2019 ಇತ್ತು. ಖರೀದಿ ಹಣ ನಗದು ರೂಪದಲ್ಲಿ ಕೊಟ್ಟಿರುತ್ತಾರೆ. ಸದರಿ ಹಣವನ್ನು ಕಲ್ಯಾಣಪ್ಪ ರವರ ಕೈಯಲ್ಲಿ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ಅಜ್ಜ ಕಲ್ಯಾಣಪ್ಪ ರವರ ಪರವಾಗಿ 3 ಜನ ಹಾಜರಿದ್ದರು. ನಾನು ನನಗೆ ಖರೀದಿ ವ್ಯವಹಾರದ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲ ಮತ್ತು ನಾನು ಖರೀದಿ ವ್ಯವಹಾರದಲ್ಲಿ ಭಾಗವಹಿಸಿಲ್ಲದಿದ್ದರೂ ಸಹ ಪ್ರತಿವಾದಿಯ ಮಾತು ಕೇಳಿ ಸುಳ್ಳು

O.S. NO. 42/2019

DW - 3 .

Dated 01-04-2025

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಖರೀದಿ ಹಣ ಕಲ್ಯಾಣಪ್ಪ ರವರಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.